# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## Spl.C.78/2019

**P.W.-03**
**C.W.-03**

| | | |
|---|---|---|
| ಹೆಸರು | : | M.Nagaraju |
| ಗಂಡನ ಹೆಸರು | : | Mallaiah |
| ವಯಸ್ಸು | : | 61 ವರ್ಷ |
| ಉದ್ಯೋಗ | : | Rtd. Head Master |
| ವಾಸಸ್ಥಳ | : | Udbhuru, Mysuru |

**ದಿನಾಂಕಃ23.02.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

1. ನಾನು ದಿಃ 08.08.2016 ರಿಂದ 06.08.2018 ರವರೆಗೆ ನಾನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಎನ್.ಆರ್. ಮೊಹಲ್ಲಾ, ಮೈಸೂರಿನಲ್ಲಿ ಮುಖ್ಯೋಪಾಧ್ಯಯನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 14.07.2017 ರಂದು ನನ್ನನ್ನು ನಮ್ಮ ಮೇಲಾಧಿಕಾರಿಗಳು ಮೈಸೂರು ಎಸಿಬಿ ಕಛೇರಿಗೆ ಹೋಗುವಂತೆ ಸೂಚನೆ ನೀಡಿದರು, ಅದರಂತೆ ನಾನು ಮೈಸೂರಿನ ಎಸಿಬಿ ಕಛೇರಿಗೆ ಮಧ್ಯಾಹ್ನ 3.30 ಗಂಟೆಗೆ ಹೋದೆನು. ಅಲ್ಲಿ ಚಾಸಾ–2 ಧನಲಕ್ಷ್ಮೀ ಇದ್ದರು.

2. ಎಸಿಬಿ ಪೋಲೀಸ್ ಕಛೇರಿಯಲ್ಲಿ ಡಿವೈಎಸ್‌ಪಿ ಜಿ.ಎಸ್. ಗಜೇಂದ್ರ ಪ್ರಸಾದ್ ಇದ್ದು, ನನ್ನನ್ನು ಚಾಸಾ–1 ನಿಂಗರಾಜು ಮತ್ತು 2 ರವರನ್ನು ಪರಸ್ಪರ ಪರಿಚಯ ಮಾಡಿಕೊಟ್ಟರು. ಚಾಸಾ–1 ನೀಡಿದ್ದ ದೂರನ್ನು ನನಗೆ ಹಾಗೂ ಚಾಸಾ–2 ರವರಿಗೆ ಓದಲು ಕೊಟ್ಟರು. ನನ್ನನ್ನು ಪಂಚಸಾಕ್ಷಿ 2 ಎಂದು ನಿಯೋಜಿಸಿದರು.

3. ಚಾಸಾ-1 ರವರು ಸದರಿ ದೂರಿನಲ್ಲಿ ಕೆಸರೆ ಗ್ರಾಮದ ಸರ್ವೆ ನಂ.610/4 ಮತ್ತು 610/6 ರ 1 ಎಕರೆ 30 ಗುಂಟೆ ಜಮೀನಿನ ಬಗ್ಗೆ Alienation ಮಾಡಿಕೊಡಲು ರೂ.55,000/- ರೂ.ಗಳ ಲಂಚದ ಬೇಡಿಕೆಯನ್ನು ಆರೋಪಿ ಮಾಡಿದ್ದಾರೆ ಮತ್ತು ತಾನು ರೂ.15,000/- ಕೊಟ್ಟಿದ್ದೇನೆ ಎಂದು ಚಾಸಾ-1 ದೂರಿನಲ್ಲಿ ನಮೂದಿಸಿದ್ದರು.

4. ಚಾಸಾ-1 ತಂದಿದ್ದ ರೂ.500/-ರೂ.ಗಳ 32 ನೋಟುಗಳನ್ನು ಮತ್ತು ರೂ.2,000/- 7 ನೋಟುಗಳನ್ನು ಚಾಸಾ-2 ರವರಿಗೆ ಎಣಿಸಲು ಕೊಟ್ಟರು. ಸದರಿ ನೋಟುಗಳನ್ನು ಅವರು ಎಣಿಸಿ, ನೋಟುಗಳ ಸಂಖ್ಯೆಗಳನ್ನು ನಾನು ಬರೆದುಕೊಂಡೆನು. ನೋಟುಗಳನ್ನು ಬರೆದುಕೊಂಡ ಹಾಳೆಯನ್ನು ಈಗ ನಾನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-18 ಎಂದು ಗುರುತಿಸಿದ್ದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು. ಎಸಿಬಿ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲಿನ್ ಪೌಡರನ್ನು ಹಚ್ಚಿದರು. ನಂತರ ಸದರಿ ನೋಟುಗಳನ್ನು ಚಾಸಾ-2 ರವರಿಗೆ ನೀಡಿ ಅವರು ಚಾಸಾ-1 ರವರ ಶರ್ಟಿನ ಬಲಭಾಗದ ಜೇಬಿಗೆ ಇಟ್ಟರು. ಎಸಿಬಿ ಪೋಲೀಸರು ಚಾಸಾ-1 ರವರಿಗೆ ಸದರಿ ಹಣವನ್ನು ಯಾವ ಕಾರಣಕ್ಕೂ ಹಣವನ್ನು ಮುಟ್ಟಬಾರದು ಆರೋಪಿಯು ಕೇಳಿದರೆ ಮಾತ್ರ ಹಣವನ್ನು ಕೊಡಬೇಕು ಹಾಗೂ ಹಣವನ್ನು ಕೊಟ್ಟ ನಂತರ ಹೊರಗಡೆ ಬಂದು ತಲೆಯ ಬಲಭಾಗವನ್ನು ಸವರಿಕೊಂಡು ಸೂಚನೆಯನ್ನು ನೀಡುವಂತೆ ತಿಳಿಸಿದರು.

5. ಚಾಸಾ-1 ರವರು ಹಾಜರು ಪಡಿಸಿದ ಮೊಬೈಲ್ ಮೆಮರಿ ಚಿಪನ್ನು ಕಾರ್ಡ್ ರೀಡರ್ ಮೂಲಕ ಲ್ಯಾಪ್ ಟಾಪಿಗೆ ಹಾಕಿ ನೋಡಿದಾಗ ಅದರಲ್ಲಿ ಆರೋಪಿ ಮತ್ತು ಚಾಸಾ-1 ರವರು ಸಂಭಾಷಣೆ ಇತ್ತು ಅದನ್ನು 2 ಸಿಡಿಗಳಿಗೆ ಕಾಪಿ ಮಾಡಲಾಯಿತು. ಸದರಿ ಮೆಮರಿ ಚಿಪ್ ಹಾಗೂ ಸಿಡಿಗಳನ್ನು ಪ್ರತ್ಯೇಕ ಕವರಿಗೆ ಹಾಕಿ ಮೊಹರು ಮಾಡಲಾಯಿತು. ಈಗ ಮು.ಮಾ.5 ನ್ನು ನೋಡುತ್ತಿದ್ದು

ಅದು ಮೆಮರಿ ಚಿಪ್ ಇರುವ ಕವರ್ ಆಗಿರುತ್ತದೆ. ಮು.ಮಾ.4 ಮತ್ತು 14 ಸದರಿ 2 ಸಿಡಿಗಳಿರುವ ಮೊಹರು ಮಾಡಿದ ಕವರು ಆಗಿರುತ್ತದೆ. ಅವುಗಳ ಮೇಲೆ ನನ್ನ ಸಹಿ ಇರುತ್ತದೆ.

6. ಸ್ಥಳದಲ್ಲಿ ಪ್ರಾಯೋಗಿಕ ಪಂಚನಾಮೆ ತಯಾರಿಸಲಾಯಿತು ಮತ್ತು ಫೋಟೋಗಳನ್ನು ತೆಗೆಯಲಾಯಿತು. ಸದರಿ ಪಂಚನಾಮೆ ನಿಪಿ-13 ಆಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-13(ಸಿ) ಎಂದು ಗುರುತಿಸಲಾಗಿದೆ. ಈಗ ನಾನು ನಿಪಿ-3 ರಿಂದ 7 ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ತೆಗೆದ ಫೋಟೊಗಳು ಆಗಿರುತ್ತದೆ.

**Further chief examination is deferred as the Investigation Officer in Spl.C.18/2016 is present and his chief examination as to be recorded.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮೈಸೂರು.